**ದಿನಾಂಕಃ 30.06.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಕೃಷ್ಣಪ್ಪನ ಮಗ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ವಂಶವೃಕ್ಷ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ನಾವು ಅಣ್ಣ ತಮ್ಮಂದಿರು ಸೇರಿ ಇದೇ ನ್ಯಾಯಾಲಯದಲ್ಲಿ ಓ.ಎಸ್. ನಂ.495/2012 ರಂತೆ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆಯನ್ನು ಏತಕ್ಕಾಗಿ ವಾಪಸ್ಸು ಪಡೆದಿದ್ದೀರಿ ಎಂದರೆ ಸಾಕ್ಷಿಯು ಲೋಪದೋಷ ಇರುವ ಕಾರಣ ವಾಪಸ್ಸು ಪಡೆದಿದ್ದೇವೆ ಎಂದು ನುಡಿಯುತ್ತಾರೆ.

2. ನನ್ನ ತಂದೆಗೆ ನಾವು ಮೂರು ಜನ ಮಕ್ಕಳು. ನನ್ನ ತಾತನ ಹೆಸರು ದಾಸಣ್ಣ. ದಾಸಣ್ಣನಿಗೆ ಮೂರು ಜನ ಅಣ್ಣ ತಮ್ಮಂದಿರು. ನನ್ನ ಮುತ್ತಾತನ ಹೆಸರು ಕರೇನಾಯಕ. ನನ್ನ ಕುಟುಂಬಕ್ಕೂ ಹಾಗೂ ಪ್ರತಿವಾದಿಯವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಪ್ರತಿವಾದಿಯವರ ಪೂರ್ವಜರ ಪೈಕಿ ಮೀಸೇ ಈರಣ್ಣ , ನಾದೂರಣ್ಣ , ಕರಿಯಣ್ಣ ಮತ್ತು ಚಿನ್ನಣ್ಣ ಮತ್ತು ಇವರ ಮಕ್ಕಳು ನನಗೆ ಗೊತ್ತು. ಸದರಿಯವರು ಅಂತಪುರ ಗ್ರಾಮದಲ್ಲಿ ವಾಸವಾಗಿರುತ್ತಾರೆ.

3. 3 ನೇ ಪ್ರತಿವಾದಿ ಲಕ್ಷ್ಮಮ್ಮ ಹಾಗೂ ಅವರ ಮಕ್ಕಳು ಪ್ರತಿವಾದಿ 4 ರಿಂದ 7 ರವರು ಸೊರೆಕುಂಟೆ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಅವರಿಗೆ ತೊಂದರೆ ಇದ್ದ ಕಾರಣ ಸೊರೆಕುಂಟೆಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಅಂತಪುರಕ್ಕೂ ಸೂರೆಕುಂಟೆ ಗ್ರಾಮಕ್ಕೂ 5 ಕಿ.ಮೀ ದೂರವಿದೆ. ದಾವಾ ಐಟಂ ನಂ. 2 ಕ್ಕೂ ಸೂರೆಕುಂಟೆಗೂ 1 ಕಿ.ಮೀ ದೂರವಿದೆ. ಅಂತಪುರಕ್ಕೆ 6 ಕಿ.ಮೀ ದೂರವಿದೆ. ದಾವಾ ಐಟಂ ನಂ. 1 ಕ್ಕೂ ಸೂರೆಕುಂಟೆಗೂ 1 ½ ಕಿ.ಮೀ ದೂರವಿದೆ. ಅಂತಪುರಕ್ಕೆ 3 ಕಿ.ಮೀ ದೂರವಿದೆ.

4. ಸ.ನಂ.36/1 ದಾವಾ ಐಟಂ ನಂ.1 ರ ಪಕ್ಕದಲ್ಲಿದೆ. ಪ್ರತಿವಾದಿಯವರ ಮೂಲ ಪುರುಷ ಜುಂಜನಾಯಕ ಎಂದರೆ ಸರಿಯಲ್ಲ. ಜುಂಜನಾಯಕನ ಮಗ ಕರೇನಾಯಕ ಎಂದರೆ ಸರಿಯಲ್ಲ. ಸದರಿ ಕರೇನಾಯಕ ದಾವಾ ಸ್ವತ್ತುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಕರೇನಾಯಕನ ಮಗ ಕರೇಜುಂಜನಾಯಕ ಅಲಿಯಾಸ್ ಕರೇಜುಂಜಾ

ಆತನ ಮಕ್ಕಳು ಮೀಸೇ ಈರಣ್ಣ , ನಾದೂರಣ್ಣ , ಕರಿಯಣ್ಣ ಮತ್ತು ಚಿನ್ನಣ್ಣ ಎಂದರೆ ಸರಿಯಲ್ಲ. ಮೀಸೇ ಈರಣ್ಣನ 4 ಜನ ಅಣ್ಣತಮ್ಮಂದಿರು ಮರಣಹೊಂದಿರುತ್ತಾರೆ ಎಂದರೆ ಸರಿ. ಮೀಸೇ ಈರಣ್ಣನ ತಾತ ಕರೇನಾಯಕ ದಾವಾ ಐಟಂ ನಂ.1 ಮತ್ತು 2 ನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನ ರೆವಿನ್ಯೂ ದಾಖಲೆಗಳು ಕರೇನಾಯಕನ ಹೆಸರಿಗೆ ಇದ್ದು , ಅವರೇ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ಕರೇನಾಯಕನ ಮಗ ಕರೇಜುಂಜಾನಾಯಕ ಮತ್ತು ಅವರ ಮಕ್ಕಳು ಮೀಸೇ ಈರಣ್ಣ , ನಾದೂರಣ್ಣ, ಕರಿಯಣ್ಣ ಮತ್ತು ಚಿನ್ನಣ್ಣ ಇವರು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ.

5. ಕರೇಜುಂಜಾನಾಯಕನ ಮರಣಾ ನಂತರ ಮೀಸೇ ಈರಣ್ಣ , ನಾದೂರಣ್ಣ , ಕರಿಯಣ್ಣ ಮತ್ತು ಚಿನ್ನಣ್ಣ ಇವರುಗಳು ದಾವಾ ಜಮೀನಿನ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಮೀಸೇ ಈರಣ್ಣ , ನಾದೂರಣ್ಣ , ಕರಿಯಣ್ಣ ಮತ್ತು ಚಿನ್ನಣ್ಣ ನವರ ಮರಣಾನಂತರ ಪ್ರತಿವಾದಿಗಳು ದಾವಾ ಜಮೀನಿನ ಸ್ವಾಧೀನಾನುಭದಲ್ಲಿದ್ದಾರೆ ಎಂದರೆ ಸರಿಯಲ್ಲ. ಕರೇನಾಯಕನ ಮರಣಾನಂತರ ಆತನ ಮೊಮ್ಮಗ ಮೀಸೆ ಈರನಾಯಕ , ನಾದೂರಣ್ಣ , ಕರಿಯಣ್ಣ ಮತ್ತು ಚಿನ್ನಣ್ಣ ಇವರ ಹೆಸರಿಗೆ ಪವತಿವಾರಸು ಆಧಾರದ ಮೇಲೆ ಎಂ.ಆರ್.ನಂ.24/2000-01 ರಂತೆ ಖಾತೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ರೆವಿನ್ಯೂ ಅಧಿಕಾರಿಗಳಿಗೆ ಸುಳ್ಳು ಮಾಹಿತಿ ಕೊಟ್ಟು ಅವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

6. ಮೀಸೇಈರನಾಯಕ ಮರಣಾನಂತರ ಆತನ ಇಬ್ಬರ ಹೆಂಡತಿಯರಾದ 1 ನೇ ಹೆಂಡತಿ ರಾಮಕ್ಕ ಮತ್ತು 2 ನೇ ಹೆಂಡತಿ ರಾಮಕ್ಕನವರ ಹೆಸರಿಗೆ ಜಂಟೀಯಾಗಿ ಪವತಿವಾರಸು ಆಧಾರ ಮೇರೆಗೆ ಎಂ.ಆರ್.ನಂ.10/2008-09 ರಂತೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ಸ.ನಂ.36/1 ರ ಜಮೀನು ಮೀಸೇಈರನಾಯಕನ ತಂದೆ ಕರೇಜುಂಜನಾಯಕನ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ಸ್ವತ್ತು ಮೀಸೇ ಈರನಾಯಕ ಮತ್ತು ಅವರ ಅಣ್ಣ ತಮ್ಮಂದಿರಿಗೆ ಜಂಟೀ ಖಾತೆಯಾಗಿರುತ್ತದೆ ಎಂದರೆ ಸರಿ.

7. ಸದರಿ ಮ್ಯುಟೇಶನ್ ಮತ್ತು ಖಾತೆ ಬದಲಾವಣೆಯಾಗುವ ಆಗುವ ಕಾಲಕ್ಕೆ ನಾವು ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾತನಿಗೆ ರೆವಿನ್ಯೂ ದಾಖಲೆಗಳ

ಬಗ್ಗೆ ಅಷ್ಟು ಮಾಹಿತಿ ಇಲ್ಲದೇ ಇರುವ ಕಾರಣ ತಕರಾರು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸದರಿ ಖಾತೆ ಬದಲಾವಣೆಯಾದ ಬಗ್ಗೆ ನನ್ನ ತಾತ ಮತ್ತು ನನ್ನ ತಂದೆ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

8. ನನ್ನ ಕುಟುಂಬದ ಪೂರ್ವಜರು ಮರಣಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಸೂರೆಕುಂಟೆಯಿಂದ ಶಾಖದಡು ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆಯ ಬಲಭಾಗಕ್ಕೆ ನನ್ನ ಮನೆ ಇದೆ ಎಂದರೆ ಸರಿ. ಸದರಿ ರಸ್ತೆಯ ಎಡಭಾಗಕ್ಕೆ 3 ನೇ ಪ್ರತಿವಾದಿ ಲಕ್ಷ್ಮಮ್ಮನ ಮನೆ ಇದೆ ಎಂದರೆ ಸರಿ. ನನ್ನ ತಂದೆಯ ಕಾಲದಿಂದಲೂ ಸಹ ನಾವು ಹಾಗೂ 3 ನೇ ಪ್ರತಿವಾದಿ ಅನ್ಯೋನ್ಯವಾಗಿದ್ವೆವು ಎಂದರೆ ಸಾಕ್ಷಿಯು ಅವರ ಪಾಡಿಗೆ ಅವರು ನಮ್ಮ ಪಾಡಿಗೆ ನಾವು ಇದ್ವೆವು ಎಂದು ನುಡಿಯುತ್ತಾರೆ. ನನ್ನ ತಂಗಿಯ ಮದುವೆಗೆ 3 ನೇ ಪ್ರತಿವಾದಿಗೆ ಕರೆದಿರುತ್ತೇವೆ ಎಂದರೆ ಸರಿ.

9. 3 ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ಸರಿ. 3 ನೇ ಪ್ರತಿವಾದಿಯವರು ತಮ್ಮ ಮನೆಯ ಕಾಗದ ಪತ್ರಗಳ ಬಗ್ಗೆ ನನ್ನ ತಂದೆಯವರಿಗೆ ಕೇಳುತ್ತಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಲಕ್ಷ್ಮಮ್ಮನ ಗುಡಿಸಲು ಗಾಳಿಗೆ ಬಿದ್ದು ಹೋಗಿತ್ತು ಎಂದರೆ ಗೊತ್ತಿಲ್ಲ. ಸದರಿ ಗುಡಿಸಲು ಬಿದ್ದು ಹೋದ ಕಾರಣ ನಿಪಿ-35 ಮತ್ತು 36 ಮೂಲ ಕ್ರಯಪತ್ರಗಳು 3 ನೇ ಪ್ರತಿವಾದಿ ನಮ್ಮ ಮನೆಯಲ್ಲಿಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ-35 ಮತ್ತು 36 ಪ್ರತಿವಾದಿಗಳಿಗೆ ಸೇರಿದ ಮೂಲ ಕ್ರಯಪತ್ರಗಳು ಎಂದರೆ ಸುಳ್ಳು.

**<u>ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.